ಪಶು ವೈದ್ಯಾಧಿಕಾರಿಗಳ ನೇಮಕ

444 (825) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಪಶುವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು (ವೃಂದವಾರು–ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಎಷ್ಟು ಹುದ್ದೆಗಳು ಖಾಲಿ ಇವೆ; ಖಾಲಿ ಇದ್ದ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು;

ಇ) ಹಾಗಿದ್ದಲ್ಲಿ, ಯಾವಾಗ ನೇಮಕಾತಿ ಮಾಡಿಕೊಳ್ಳಲಾಗುವುದು?

ಶ್ರೀ ರೇವೂ ನಾಯಕ್ ಬೆಳಮಗಿ (ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು) :

ಅ) 2,392

ವೃಂದವಾರು– ಜಿಲ್ಲಾವಾರು ವಿವರ ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) 770.

ಪಶುವೈದ್ಯಾಧಿಕಾರಿ ಹುದ್ದೆಗೆ ವಿಶೇಷ ನೇರ ನೇಮಕಾತಿ ನಿಯಮ ಅಥವಾ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಪಶುವೈದ್ಯಕೀಯ ವಿಜ್ಞಾನದಲ್ಲಿ ಪದವಿ (ಬಿ.ವಿ.ಎಸ್ಸಿ) ಪಡೆದಿರುವ ಅಭ್ಯರ್ಥಿಗಳಿಂದ ನೇಮಕಾತಿ ಮಾಡಿಕೊಳ್ಳಲಾಗುವುದು.

ಇ) 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮದಡಿ ಭರ್ತಿ ಮಾಡಿಕೊಳ್ಳಲು ತೀರ್ಮಾನಿಸಿದ್ದು, ಈ ಪೈಕಿ ನವೆಂಬರ್–2010ರಲ್ಲಿ 211 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇಮಕಾತಿ ನಿಯಮದಡಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಇನ್ನುಳಿದ 276 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ಶೀಘ್ರದಲ್ಲೇ ನೇಮಕಾತಿ ಮಾಡಲಾಗುವುದು.

ಅನುಬಂಧ – 1

ವೃಂದವಾರು / ಜಿಲ್ಲಾವಾರು ಪಶುವೈದ್ಯಾಧಿಕಾರಿಗಳ ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ಪಶುವೈದ್ಯಾಧಿಕಾರಿ
1	ಬೆಂಗಳೂರು ನಗರ	99
2	ಬೆಂಗಳೂರು ಗ್ರಾಮಾಂತರ	44
3	ತುಮಕೂರು	129
4	ಚಿತ್ರದುರ್ಗ	66
5	ದಾವಣಗೆರೆ	83
6	ಕೋಲಾರ	69
7	ಶಿವಮೊಗ್ಗ	86
8	ಚಿಕ್ಕಬಳ್ಳಾಪುರ	59
9	ರಾಮನಗರ	59
10	ಮೈಸೂರು	91
11	ಚಾಮರಾಜನಗರ	40
12	ದಕ್ಷಿಣ ಕನ್ನಡ	50
13	ಉಡುಪಿ	42
14	ಹಾಸನ	102
15	ಚಿಕ್ಕಮಗಳೂರು	83
16	ಮಂಡ್ಯ	113
17	ಕೊಡಗು	36
18	ಬೆಳಗಾವಿ	178
19	ಬಿಜಾಪುರ	69
20	ಬಾಗಲಕೋಟೆ	83
21	ಧಾರವಾಡ	63
22	ಗದಗ್	67
23	ಹಾವೇರಿ	79
24	ಉತ್ತ ಕನ್ನಡ	96
25	ಗುಲ್ಬರ್ಗಾ	132

26	ಯಾದಗಿರಿ	45
27	ಬಳ್ಳಾರಿ	102
28	ಬೀದರ್	92
29	ರಾಯಚೂರು	74
30	ಕೊಪ್ಪಳ	61
	ಒಟ್ಟು	**2,392**

ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಪ್ರಾರಂಭ

445 (826) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಹೊಸದಾಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶ ಹೊಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ (ಸಂಪೂರ್ಣ ವಿವರ ನಿಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಮುದ್ದೇಬಿಹಾಳ ತಾಲ್ಲೂಕಿನ ಈ ಕೆಳಕಂಡ 6 ಸ್ಥಳಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ಕೋರಲಾಗಿದೆ.

1) ಕಾಳಗಿ 2) ತಾಳಿಕೋಟಿ (ಕನ್ನಡ) 3) ತಾಳಿಕೋಟಿ (ಉರ್ದು) 4) ಬೊಮ್ಮನಹಳ್ಳಿ, 5) ನಾವದಗಿ 6) ಯರಝರಿ ಮುದ್ದೇಬಿಹಾಳ ತಾಲ್ಲೂಕಿನ ರೋಡಗಿ ಮತ್ತು ತಾಳೀಕೋಟೆ ಗ್ರಾಮದಲ್ಲಿರುವ 8ನೇ ತರಗತಿ ಹೊಂದಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆ ಗಳನ್ನಾಗಿ ಉನ್ನತೀಕರಿಸಿ ಪ್ರಾರಂಭಿಸಲು ಕೇಂದ್ರ ಸರ್ಕಾರದಿಂದ ಅನುಮೋದನೆ ದೊರಕಿದ್ದು ಇವುಗಳನ್ನು 2011–12ನೇ ಸಾಲಿನಿಂದ ಪ್ರಾರಂಭಿಸಲಾಗುವುದು.